**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿಸಿ ನಂ. 1012/2022**

| | | | |
|---|---|---|---|
| **ಹೆಸರು** | **:** | **ಅಶೋಕ** | ಚಾ.ಸಾ. 5 |
| **ತಂದೆಯ ಹೆಸರು** | **:** | **ಮಲ್ಲಪ್ಪ** | ಪ್ರಾ.ಸಾ. 3 |
| **ವಯಸ್ಸು** | **:** | **40 ವರ್ಷ** | ದಿನಾಂಕಃ 23-09-2024 |
| **ಉದ್ಯೋಗ** | **:** | **ಒಕ್ಕಲುತನ** | |
| **ವಾಸಸ್ಥಳ** | **:** | **ಪರದಾರಮೋತಕಪಳ್ಳಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಚಾಸಾ 2 ಮತ್ತು 3 ರವರು ನನಗೆ ಗೊತ್ತು. ಪ್ರಾಸಾ 1 ನನ್ನ ಹೆಂಡತಿ. ಪ್ರಾಸಾ 2 ಮತ್ತು ಚಾಸಾ 6 ರವರು ನನ್ನ ಅಣ್ಣನ ಮಕ್ಕಳು. ಚಾಸಾ 7 ನಮ್ಮ ಊರಿನವರು. 1ನೇ ಆರೋಪಿ ನನ್ನ ತಮ್ಮ. 2ನೇ ಆರೋಪಿತಳು ನನ್ನ ಅತ್ತಿಗೆ.

ಈಗೆ 2 ವರ್ಷಗಳ ಹಿಂದೆ ಪ್ರಾಸಾ 1 ರವರು ಹೊಲದಿಂದ ಮನೆಗೆ ಹೋಗುತ್ತಿರುವಾಗ ನಾನು ಪ್ರಾಸಾ 1 ರವರ ಸ್ವಲ್ಪ ಹಿಂದೆ ಬರುತ್ತಿದ್ದೆ. ಆಗ ನನ್ನ ಅಣ್ಣನಾದ ಶ್ರೀಮಂತ ರವರ ಮನೆ ಹತ್ತಿರ 1 ಮತ್ತು 2ನೇ ಆರೋಪಿತರು ಪ್ರಾಸಾ 1 ರವರ ಜೊತೆ ಜಗಳ ಮಾಡಿ ಅವರ ಕೈಒಡ್ಡು ಮುರಿದಿರುತ್ತಾರೆ. ಆಗ ನಾನು ಜಗಳದ ಬಗ್ಗೆ ಕೇಳಿದಾಗ 1ನೇ ಆರೋಪಿ ನನಗೆ ಆಸ್ತಿ ಕೊಡುತಿಲ್ಲ ಎಂದು ಹೇಳಿ ನನ್ನ ಜೊತೆ ಜಗಳ ಮಾಡಿರುತ್ತಾನೆ. ಜಗಳದ ಸಮಯಕ್ಕೆ ಚಾಸಾ 2, 3 ಮತ್ತು ನನ್ನ ಅಣ್ಣನ ಮಕ್ಕಳು ಇದ್ದರು. ಅವರು ಬಂದು ಜಗಳ ಬಿಡಿಸಿರುತ್ತಾರೆ. ಮರುದಿನ ಪೋಲಿಸರು ನನ್ನ ಅಣ್ಣನ ಮನೆ ಹತ್ತಿರ ಬಂದು ಪಂಚನಾಮೆ ಮಾಡಿಕೊಂಡು ಹೋಗಿರುತ್ತಾರೆ. ಪೋಲಿಸರು ನನಗೆ ಕೇಳಿದಾಗ ಘಟನೆ ಬಗ್ಗೆ ಹೇಳಿದ್ದೇನೆ.

ಈಗ ನೋಡುತ್ತಿರುವ ನಿಪಿ-2 ರ ಭಾವಚಿತ್ರದಲ್ಲಿ ನಾನು ಇದ್ದೇನೆ. ಸದರಿ ಭಾವಚಿತ್ರವನ್ನು ಪಿಂಚನಾಮೆ ಮಾಲಕ್ಕೆ ಪಡೆದಿದ್ದಾರೆ. ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಪಿ-3 ಎಂದು ಮತ್ತು ಅದರಲಿರುವ ನನ್ನ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಪಂಚನಾಮೆ ಕಾಲಕ್ಕೆ ಮಾಡಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರವಾಗಿ ವಕೀಲರು ಗೈರು ಹಾಜರಿರುವ ಕಾರಣ ಪಾಟೀಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

**ಮರುವಿಚಾರಣೆಃ ಇಲ್ಲಾ .**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**